472 (880) ಶ್ರೀ ಸಿದ್ದು ಸವದಿ (ಜಮಖಂಡಿ) :- ಮಾನ್ಯ ಪ್ರವಾಸೋದ್ಯಮ ಮತ್ತು ಮೂಲಸೌಲಭ್ಯ ಅಭಿವೃದ್ಧಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಜಮಖಂಡಿ ಪಟ್ಟಣದಲ್ಲಿ ನಗರಕ್ಕೆ ಹೊಂದಿಕೊಂಡು ಇರುವ ಪಟವರ್ಧನ ಮಹಾರಾಜರ ಅರಮನೆ ಯಾರ ವಶದಲ್ಲಿ ಇದೆ;

ಆ) ಈ ಅರಮನೆಯನ್ನು ಪ್ರವಾಸಿ ಕೇಂದ್ರವನ್ನಾಗಿಸಬೇಕೆಂದು ಅಲ್ಲಿನ ಮತ್ತು ಸುತ್ತಮುತ್ತಲಿನ ಜನರ ಬೇಡಿಕೆ ಇರುವುದು ಸರ್ಕಾರದ ಗಮನಕ್ಕೆ ಬಂದಿಲ್ಲವೆ;

ಇ) ಈ ಬೇಡಿಕೆಯನ್ನು ಯಾವಾಗ ಜಾರಿಗೆ ತರಲಾಗುವುದು;

ಈ) ಮೈಸೂರು ಅರಮನೆಯಂತೆ ಈ ಅರಮನೆಯನ್ನು ಸರ್ಕಾರ ವಶಪಡಿಸಿಕೊಳ್ಳಲು ಇರುವ ಕಾನೂನಿನ ತೊಂದರೆಗಳೇನು;

ಉ) ಅದನ್ನು ಕಾನೂನಡಿ ಮಾರಾಟ ಮಾಡಬಹುದೇ; ಹಾಗಿದ್ದರೆ ಅದನ್ನು ಎಷ್ಟಕ್ಕೆ ಮಾರಲಾಗಿದೆ; ಯಾರಿಗೆ ಮಾರಲಾಗಿದೆ; ಅದರ ವಿಸ್ತೀರ್ಣವೆಷ್ಟು?

ಶ್ರೀ ಶ್ರೀರಾಮುಲು (ಪ್ರವಾಸೋದ್ಯಮ ಮತ್ತು ಮೂಲಸೌಲಭ್ಯ ಅಭಿವೃದ್ಧಿ ಸಚಿವರು) :

ಅ) ಈ ಅರಮನೆಯು ಖಾಸಗಿ ಆಸ್ತಿಯಾಗಿದ್ದು ಪಟವರ್ಧನ ಮಹಾರಾಜರ ವಾರಸುದಾರರ ವಶದಲ್ಲಿರುತ್ತದೆ.

ಆ) ಹೌದು.

ಇ) ಇದು ಖಾಸಗಿ ಆಸ್ತಿಯಾಗಿರುವುದರಿಂದ ಇಲ್ಲಿ ಯಆವ ರೀತಿಯ ಸೌಲಭ್ಯಗಳನ್ನು ಕೈಗೊಳ್ಳಬಹುದೆಂಬ ಬಗ್ಗೆ ಜಿಲ್ಲಾಧಿಕಾರಿಗಳಿಂದ ವರದಿ ತರಿಸಿಕೊಂಡು ನಂತರ ಕ್ರಮ ಕೈಗೊಳ್ಳಲಾಗುವುದು.

ಈ) ಇದು ಖಾಸಗಿ ಅರಮನೆಯಾಗಿರುತ್ತದೆ. ಆದ್ದರಿಂದ ಇದನ್ನು ವಶಪಡಿಸಿಕೊಳ್ಳುವ ಯೋಜನೆಯು ಸರ್ಕಾರದ ಮುಂದೆ ಇರುವುದಿಲ್ಲ.

ಉ) ಮೇಲಿನ ಉತ್ತರಗಳ ಹಿನ್ನೆಲೆಯಲ್ಲಿ ಉದ್ಭವಿಸುವುದಿಲ್ಲ.